ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **1759/2021**

| | | |
|---|---|---|
| ಸಾಕ್ಷಿಯ ಹೆಸರುಃ | ಬಸವರಾಜ | DW-1 |
| ತಂದೆಯ ಹೆಸರುಃ | ಸುಬ್ಬೇಗೌಡ | |
| ವಯಸ್ಸುಃ | 53 ವರ್ಷ | ಪ್ರಮಾಣೀಕರಿಸಿದ ದಿಃ 21.01.2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಬೆಳ್ತೂರು ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

1. ದೂರುದಾರರು ನನಗೆ ಸುಮಾರು 10-12 ವರ್ಷದಿಂದ ಪರಿಚಯ. ಅವರು ಸೋಡಿ ಚೀಟಿ ವ್ಯವಹಾರ ಮಾಡುತ್ತಿದ್ದರು. ಅವರ ಚೀಟಿ ವ್ಯವಹಾರದಲ್ಲಿ ನಾನು ಸಹ ಚೀಟಿ ಹಾಕಿದ್ದೆ. ಪ್ರತಿ ತಿಂಗಳು 2 ಸಾವಿರ ಕಟ್ಟಬೇಕಾಗಿತ್ತು. ನಾನು 40 ಸಾವಿರ ಚೀಟಿ ಹಣ ಪಡೆದಿದ್ದೆ, ಆ ಸಮಯದಲ್ಲಿ ಅವರು ಭದ್ರತೆಗಾಗಿ ನನ್ನಿಂದ ಒಂದು ಖಾಲಿ ಚೆಕ್ ಪಡೆದಿದ್ದರು. ನಂತರ 50 ಸಾವಿರ ಚೀಟಿ ಹಣ ನಾನು ಪೂರ್ತಿ ಕಟ್ಟಿದ ನಂತರ ಖಾಲಿ ಚೆಕ್ ವಾಪಸ್ ಕೇಳಿದಾಗ, ಅಲ್ಲಿ ಇಲ್ಲಿ ಇದೆ ಎಂದು ಹೇಳಿ 2-3 ತಿಂಗಳು ತಳ್ಳಿರುತ್ತಾರೆ.
2. ನಂತರ ಚೀಟಿ ಲಾಸ್ ಆಗಿದ್ದು, ನನಗೆ ಇನ್ನೂ ಸ್ವಲ್ಪ ದುಡ್ಡು ಕೊಡು ಇಲ್ಲದಿದ್ದರೆ ಕೇಸ್ ಹಾಕುತ್ತೇನೆ ಎಂದು ಹೇಳಿದರು. ನಾನು ಪೂರ್ತಿ ಹಣ ಕಟ್ಟಿದ್ದು ಕೊಡುವುದಿಲ್ಲ ಎಂದು ಹೇಳಿರುತ್ತೇನೆ. ನನ್ನ ಬಳಿ ಖಾಲಿ ಚೆಕ್ ಇದೆ ನೋಡಿಕೊಳ್ಳುತ್ತೇನೆ ಎಂದು ಹೇಳಿದರು.
3. ನಂತರ ಅವರು ನನಗೆ ನೊಟೀಸು ಕಳಿಸಿರುತ್ತಾರೆ. ನಂತರ ನಾನು ಅವರ ಮನೆಗೆ ಹೋಗಿ ಏಕೆ ಸುಳ್ಳು ನೊಟೀಸು ನೀಡಿದ್ದೀರಾ ಎಂದು ಕೇಳಿದ್ದಕ್ಕೆ ಬೇರೆಯವರಗೆ ನೀಡಬೇಕಾಗಿತ್ತು ನಿನಗೆ ಬಂದಿದೆ ಕೊಡು ಎಂದು ಹೇಳಿ ನೊಟೀಸು ನನ್ನಿಂದ ಪಡೆದು ಅದನ್ನು ಹರಿದು ಹಾಕಿರುತ್ತಾರೆ. ನಂತರ ನಿನಗೆ ಏನೂ ತೊಂದರೆ ಆಗುವುದಿಲ್ಲ ಹೋಗು ಎಂದು ತಿಳಿಸಿರುತ್ತಾರೆ.
4. ನಂತರ ನನಗೆ ನ್ಯಾಯಾಲಯದಿಂದ ನೊಟೀಸು ಬಂದಿದ್ದರಿಂದ, ದೂರುದಾರರು ನನ್ನ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿದ ವಿಚಾರ ಗೊತ್ತಾಗಿರುತ್ತದೆ. ನಂತರ ಸಹ ನಾನು ಹೋಗಿ ಅವರನ್ನು ಕೇಳಿದಾಗ 25 ಸಾವಿರ ಲಾಸ್ ಆಗಿದೆ ಎಲ್ಲ ಸೇರಿ ಕಟ್ಟಬೇಕು ಹಣ ಕೊಡು ಎಂದು ಕೇಳಿರುತ್ತಾರೆ.

5. ನಾನು ದೂರುದಾರರಿಂದ ಯಾವುದೇ ಸಾಲ ಪಡೆದಿಲ್ಲ ಹಾಗೂ ಅವರಿಗೆ ಸಾಲದ ಮರುಪಾವತಿಗಾಗಿ ಯಾವುದೇ ಚೆಕ್ ನಾನು ನೀಡಿಲ್ಲ. ನಾನು ಅವರಿಗೆ ಯಾವುದೇ ಹಣ ನೀಡಬೇಕಾಗಿಲ್ಲ.
6. ಚೀಟಿ ವ್ಯವಹಾರದ ಸಲುವಾಗಿ ಪಡೆದ ನಿಪಿ-1ರ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಅವರು ಈ ಸುಳ್ಳು ದೂರು ನೀಡಿರುತ್ತಾರೆ.
7. ಕಾರಣ ಸದರಿ ಸುಳ್ಳು ದೂರನ್ನು ವಜಾ ಮಾಡಿಕೊಡಬೇಕಾಗಿ ಈ ಮೂಲಕ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ದೂರುದಾರರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ